**ಸಾಕ್ಷಿಗೆ ದಿನಾಂಕ: 09.12.2024 ರಂದು ಕರೆದು ಪ್ರಮಾಣ ವಚನ ಭೋದಿಸಲಾಯಿತು.**

**ಪಾಟೀ ಸವಾಲುಃ 1ನೇ ಪ್ರತಿವಾದಿ ಪರ ವಕೀಲರಾದ ಶ್ರೀ BKS ರವರಿಂದ.**

ನನ್ನ ಸಾಕ್ಷ್ಯ ಪ್ರಮಾಣ ಪತ್ರದಲ್ಲಿ ಏನು ಬರೆದಿರುತ್ತದೆ ಎಂದು ನನಗೆ ಗೊತ್ತಿಲ್ಲ, ನನಗೆ ಓದಲು ಬರುವುದಿಲ್ಲ. 1ನೇ ಪ್ರತಿವಾದಿಯ ಗಂಡನ ಜೊತೆ ನಮ್ಮದು ಒಳ್ಳೆಯ ಬಾಂದವ್ಯ ಇರುತ್ತದೆ. ನಮ್ಮ ಮತ್ತು ದಾವಾ ಆಸ್ತಿಯು ಬೇರೆ ಬೇರೆ ಕಡೆ ಇರುತ್ತದೆ. ವಾದಿ ಹಾಗೂ ನಮ್ಮ ಮನೆ ಅಕ್ಕಪಕ್ಕದಲ್ಲಿರುವವುದರಿಂದ ವಾದಿಯು ಪರಿಚಯ ಇರುತ್ತಾರೆ. 1ನೇ ಪ್ರತಿವಾದಿ ಗಂಡನ ಜೊತೆ ನನ್ನ ವೈಮನಸ್ಯ ಇರುತ್ತದೆ ಎಂದರೆ ಸರಿಯಲ್ಲ.

1ನೇ ಪ್ರತಿವಾದಿಯ ಹೊಲದ ಸರ್ವೆ ನಂಬರ ನನಗೆ ಹೇಳಲು ಬರುವುದಿಲ್ಲ. ಅದೇ ರೀತಿ 2ನೇ ಪ್ರತಿವಾದಿಯ ಹೊಲದ ಸರ್ವೆ ನಂಬರ ಸಹ ನನಗೆ ಗೊತ್ತಿಲ್ಲ. ದಾವಾ ಆಸ್ತಿಯಲ್ಲಿ ಯಾರು ಯಾರಿಗೆ ಅತೀ ಕ್ರಮಣ ಮಾಡಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ದಾವಾ ಆಸ್ತಿ ಏನು ಇದೆ ಎಂದು ನನಗೆ ಗೊತ್ತಿಲ್ಲ. 2ನೇ ಪ್ರತಿವಾದಿ ನಮ್ಮ ಗ್ರಾಮದ ಶಾಲೆಯ ಎಸ್ ಡಿ ಎಂ ಸಿ ಅದ್ಯಕ್ಷರಾಗಿರುತ್ತಾರೆ ಎಂದರೆ ನಿಜ. ನಾನು ಹೇಳಿದಂತೆ 2ನೇ ಪ್ರತಿವಾದಿಯು ಅದ್ಯಕ್ಷರು ಇರುವುದಿಲ್ಲ ಎಂದರೆ ಸರಿಯಲ್ಲ. ನಮ್ಮ ಗ್ರಾಮದ ಪ್ರೌಢ ಶಾಲೆಯು ಅಕ್ಷಯ ಟ್ರಸ್ಟ ಇವರ ಅಧೀನದಲ್ಲಿದೆ ಎಂದರೆ ನಿಜ.

ಡೈರಿ ನಂ. 682 ರಂತೆ ದಿಃ 01.03.1950 ರಲ್ಲಿ ಪೋಟ್ ಹಿಸ್ಸಾ ನಕ್ಷೆಯನ್ನು

ದಿಃ 24.05.2010 ರಂದು ಪೋಡಿ ಮಾಡುವ ಕಾಲದಲ್ಲಿ ದಾವಾ ಆಸ್ತಿಯ ನಕಾಶೆಯನ್ನು ತಿದ್ದು ಪಡಿ ಮಾಡಲಾಗಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. 1ನೇ ಪ್ರತಿವಾದಿಯು ಮಹಾದೇವಪ್ಪ ಇವರ ಜಮೀನನ್ನು ಖರೀದಿ ಮಾಡಿರುತ್ತಾರೆ. ಸದರಿ ಜಮೀನಿನಲ್ಲಿ ಮಹಾದೇವಪ್ಪ ಎಷ್ಟು ಕ್ಷೇತ್ರದಲ್ಲಿ ಕಬ್ಜಾ ಇದ್ದರು ಅಷ್ಟೇ ಜಮೀನನಲ್ಲಿ ಕಬ್ಜಾ 1ನೇ ಪ್ರತಿವಾದಿಯು ಸಹ ಕಬ್ಜಾ ಇರುತ್ತಾರೆ ಎಂದರೆ ನಿಜ. ದಾವಾ ಆಸ್ತಿಯಲ್ಲಿ ಒಂದು ದೊಡ್ಡ ಮಾವಿನ ಗಿಡ ಇರುತ್ತದೆ ಎಂದರೆ ನಿಜ. ದಾವಾ ಆಸ್ತಿಯಲ್ಲಿ 1ನೇ ಪ್ರತಿವಾದಿಯು ಪಂಚಾಯತಿ ಅನುಮತಿ ಪಡೆದುಕೊಂಡು ಒಂದು ಗ್ಯಾರೇಜ್ ಕಟ್ಟಡ ನಿರ್ಮಾಣ ಮಾಡಿಕೊಂಡಿರುತ್ತಾರೆ ಎಂದರೆ ನಿಜ. ದಾವಾ ಆಸ್ತಿಯ ಕುರಿತು ADLR ಬೈಲಹೊಂಗಲ ಇವರಿಂದ ತಡೆಯಾಜ್ಞೆ ಇರುವ ಬಗ್ಗೆ ನನಗೆ ಗೊತ್ತಿಲ್ಲ. ದಾವಾ ಆಸ್ತಿಯಲ್ಲಿರುವ ಮಾವಿನ ಗಿಡದ ಟೊಂಗೆಗಳನ್ನು ಕಡಿದಿರುತ್ತಾರೆ ಎಂದರೆ ನಿಜ.

ನಮ್ಮ ಗ್ರಾಮದ ಪ್ರೌಢ ಶಾಲೆಯನ್ನು ಕಟ್ಟಿರುವುದು ಗೊತ್ತಿರುತ್ತದೆ. ಸದರಿ ಶಾಲೆಯನ್ನು ಸರಿಯಾಗಿ ಅಳತೆ ಮಾಡಿದ ನಂತರವೇ ಕಟ್ಟಿರುತ್ತಾರೆ ಎಂದರೆ ನಿಜ. ಸದರಿ ಶಾಲೆಯ ಕಟ್ಟಿ ಎಷ್ಟು ವರ್ಷ ಆಗಿರುತ್ತದೆ ಎಂದರೆ ನನಗೆ ಗೊತ್ತಾಗುವುದಿಲ್ಲ ಎಂದು ಹೇಳುತ್ತಾರೆ. ಮಹಾದೇವಪ್ಪ ಬಡಿಗೇರ ಇವರು ದಾವಾ ಆಸ್ತಿಯಲ್ಲಿ ಅತೀಕ್ರಮಣ ಮಾಡಿರುತ್ತಾರೆ ಎಂದು ಯಾವುದೇ ತಂಟೆ ತಕರಾರು ಇರಲಿಲ್ಲ ಎಂದರೆ ನಿಜ. ಪ್ರತಿವಾದಿಗಳು ದಾವಾ ಆಸ್ತಿಯಲ್ಲಿ ಯಾವುದೇ ರೀತಿಯ ಅತೀಕ್ರಮಣವನ್ನು ಯಾವತ್ತೂ ಮಾಡಿರುವುದಿಲ್ಲ ಎಂದರೆ ನಿಜ. ನನಗೆ ದಾವೆಯ ಬಗ್ಗೆ ಯಾವುದೇ ಮಾಹಿತಿ ಇರದೇ ಇದ್ದರೂ ವಾದಿಯು ಆತ್ಮೀಯರಾಗಿರುವ

ಕಾರಣ ಅವರಿಗೆ ಅನುಕೂಲವಾಗುವಂತೆ ನ್ಯಾಯಾಲಯದ ಮುಂದೆ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ನಿಜ.

**ಪ್ರತಿವಾದಿ ನಂ. 2 ಮತ್ತು 3 ರವರ ಪರ ವಕೀಲರುಗಳು ಪಾಟೀ ಸವಾಲಿಗೆ ಸಮಯವಕಾಶವನ್ನು ಕೋರಿದ್ದರಿಂದ, ಪ್ರತಿವಾದಿ ನಂ. 2 ಮತ್ತು 3 ರವರ ಪರ ಪಾಟೀ ಸವಾಲಿಗೆ ಅವಕಾಶ ನೀಡಿ ಮುಂದೂಡಲಾಯಿತು.**

( ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓದಿ ಹೇಳಿ ಕೇಳಿ ಸರಿ ಅದೆ.

**ದಿವಾಣಿ ನ್ಯಾಯಾಧೀಶರು, ಕಿತ್ತೂರ.**